## ದಿನಾಂಕ:18.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

## ಮುಂದುವರೆದ ಪಾಟೀ ಸವಾಲು 6ನೇ ಪ್ರತಿವಾದಿ ಪರ ಶ್ರೀ VSG ರವರಿಂದ:-

**(ಸಾಕ್ಷಿಗೆ ಕನ್ನಡ ಭಾಷೆಯು ಬರದೆ ಇರುವುದರಿಂದ ಮರಾಠಿ ಭಾಷೆಯಲ್ಲಿ ಕೇಳಿದ ಪ್ರಶ್ನೆಗಳನ್ನು ಅರ್ಥೈಸಿಕೊಂಡು ಉಭಯ ಪಕ್ಷಗಾರರ ವಕೀಲರ ಉಪಸ್ಥಿತಿ ಮೇರೆಗೆ ತರ್ಜುಮೆ ಮಾಡಿ ಕನ್ನಡ ಭಾಷೆಯಲ್ಲಿ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲಾಯಿತು. ಕನ್ನಡ ಭಾಷೆಗೆ ತರ್ಜುಮೆ ಮಾಡಿ ನೀಡಿದ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲು ಉಭಯ ಪಕ್ಷಗಾರರ ಪರ ವಕೀಲರು ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ.)**

RS No.193/2 ಮೂಲತಃ ಈಶ್ವರ ರವರ ಮಾಲೀಕತ್ವದ ಆಗಿತ್ತು ಎಂದರೆ ಸರಿ. ಈಶ್ವರ ರವರಿಗೆ ಜ್ಯೋತಿಬಾ ಮತ್ತು ಬಾಳು ನಿಮ್ಮ ಮಕ್ಕಳು ಎಂದರೆ ಸರಿ. ಜ್ಯೋತಿಬಾ ರವರು 11.11.2005 ರಲ್ಲಿ ತೀರಿಕೊಂಡರು ಎಂದರೆ ಸರಿ. ಬಾಳು ಇವರು ದಿಃ 03.03.1976 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಈ ದಾವೆಯನ್ನು ಹೂಡುವ ಸಮಯದಲ್ಲಿ ಜ್ಯೋತಿಬಾ 2005 ರಲ್ಲಿ ತೀರಿಕೊಂಡ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಜ್ಯೋತಿಬಾ ರವರ ವಾರಸುದಾರರು ಶೋಬಾ ಮತ್ತು ವಿದ್ಯಾದರ ಎಂದರೆ ಸರಿ. RS No.193/2 ನ್ನು ಹೊರತು ಪಡಿಸಿ RS Nos. 188/3 21 ಗುಂಟೆ , 177/4 14 ಗುಂಟೆ , 174/13 6 ಗುಂಟೆ ಮತ್ತು 2 ಮನೆ ಸ್ವತ್ತು ಅವು ಎಂದರೆ 1132/ಬಿ ಮತ್ತು 1132/2 ನ್ನು ಹೊಂದಿದ್ದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಈಶ್ವರ ರವರ ಜೀವಾತಾವಧಿಯಲ್ಲಿ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ವಿಬಾಗವಾಗಿರುವುದಿಲ್ಲ ಎಂದರೆ ಸರಿ. ಈಶ್ವರ ರವರು ತೀರಿಕೊಂಡ ನಂತರವೂ ಸಹ ಜ್ಯೋತಿಬಾ ಮತ್ತು ಬಾಳು ರವರ ನಡುವೆ ವಿಭಾಗ ಆಗಿರುವುದಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಜ್ಯೋತಿಬಾ ರವರ ವಾರಸುದಾರರು ಆದ ಶೋಭಾ , ವೈಶಾಲಿ ಮತ್ತು ವಿದ್ಯಾದರ ರವರಿಗೆ ಅದರಲ್ಲಿ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

ಸದರಿಯವರಿಗೆ ಹಕ್ಕು ಇರುತ್ತದೆ ಎಂದು ನೀವು ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಿಪಿ 1 ರಲ್ಲಿ ಶೋಬಾ, ವಿದ್ಯಾದರ ಹಾಗೂ ವೈಶಾಲಿ ರವರ ಹೆಸರು ಇರುವುದಿಲ್ಲ ಎಂದರೆ ಸರಿ.

2. ಕುಲದೀಪ ರಿಯಲ್ ಎಸ್ಟೇಟ ಬಿಸನೆಸ ಮಾಡುತ್ತಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತರಕಾರಿ ವ್ಯಾಪಾರ ಮಾಡುತ್ತಿದ್ದ ಎನ್ನುತ್ತಾರೆ. ಮೂರನೇ ವಾದಿ ರಿಯಲ ಎಸ್ಟೇಟ ಬಿಸನೆಸ ಮಾಡುತ್ತಾನೆ ಎಂದರೆ ಸರಿಯಲ್ಲ. ನೀವು ಸದರಿಯವರು ರಿಯಲ್ ಎಸ್ಟೇಟ ಬಿಸನೆಸ ಮಾಡುತ್ತಿದ್ದರು ಸಹ ಮಾಡುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಜುಲೈ 2014 ರಲ್ಲಿ 2ನೇ ವಾದಿ ದಾವಾ ಸ್ವತ್ತಿನಲ್ಲಿ ಯಾವುದೇ ಅಧಿಕಾರ ಹೊಂದಿರದೇ ಇದ್ದರೂ ಸಹ ಅದಕ್ಕೆ ಸಂಬಂಧಿಸಿದಂತೆ ವ್ಯವಹಾರ ಮಾಡಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 2 ರಂತೆ ಪ್ರತಿವಾದಿ 3, 4 , 5 ಮತ್ತು 6 ರವರು ಪತ್ರಿಕಾ ಪ್ರಕಟಣೆಯನ್ನು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ತೆಗೆದುಕೊಂಡಿದ್ದರು ಎಂದರೆ ಸರಿ. ನೀವು ಸದರಿ ನೋಟಿಸಗೆ ಉತ್ತರ ನೀಡಿದ ದಿನಾಂಕ ನೆನಪಿದೆಯಾ ಎಂದರೆ ಸಾಕ್ಷಿ 13.08.2014 ಎನ್ನುತ್ತಾರೆ. ನೀವು ದಿಃ 12.07.2014 ಕ್ಕೂ ಪೂರ್ವದಲ್ಲಿ ಪ್ರತಿವಾದಿಗಳಿಗೆ ಖರೀದಿ ಪತ್ರ ಬರೆದುಕೊಡುವಂತೆ ನೋಟಿಸ ನೀಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ನಾನು ವ್ಯಯಕ್ತಿಕವಾಗಿ ಕೇಳಿದ್ದೇನೆ ಎನ್ನುತ್ತಾರೆ. ಸದರಿ ದಿನಾಂಕದ ಪೂರ್ವದಲ್ಲಿ ನೀವು ವ್ಯಯಕ್ತಿಕವಾಗಿ ಖರೀದಿ ಪತ್ರ ಬರೆದುಕೊಡುವಂತೆ ಕೇಳಿದ ಬಗ್ಗೆ ಪುರಾವೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನೀವು ವ್ಯಯಕ್ತಿಕವಾಗಿ ಖರೀದಿ ಪತ್ರ ಬರೆದುಕೊಡುವಂತೆ ಕೇಳಿದ್ದಕ್ಕೆ ಸಂಬಂಧಿಸಿದಂತೆ ಪುರಾವೆ ಹಾಜರು ಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತೀರಿ ಎಂದರೆ ಸರಿಯಲ್ಲ.

3. ನನ್ನ ವಕೀಲರು ಈ ದಾವೆಯಲ್ಲಿ ನನ್ನ ಪರವಾಗಿ ಹಾಜರು ಪಡಿಸಿದ ದಾಖಲೆಗಳ ಬಗ್ಗೆ ಮಾಹಿತಿ ಇರುತ್ತದೆ. 6ನೇ ಪ್ರತಿವಾದಿ ಪ್ರತಿವಾದಿ 1 ರಿಂದ 5 ಮತ್ತು 7 ಮತ್ತು 2ನೇ ವಾದಿ ರವರ ವಿರುದ್ಧ OS No.6/2015 ಪ್ರಧಾನ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ವಿಭಾಗ ಕೋರಿ ದಾವೆ ಹೂಡಿರುತ್ತೀರಿ ಎಂದರೆ ಸರಿ. ಸದರಿ ದಾವೆಯಲ್ಲಿ 2ನೇ ವಾದಿ ಸಾಕ್ಷಿ ನುಡಿಯುತ್ತಾರೆ ಅದರ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ದಾವೆಯಲ್ಲಿ 2ನೇ ವಾದಿ ತನ್ನ ಪರವಾಗಿ ಯಾವ ಸಾಕ್ಷಿದಾರರನು ಮಾಡಿಸಿರುತ್ತಾನೆ ಎಂದು ನನಗ ಗೊತ್ತಿಲ್ಲ. ಸದರಿ ದಾವೆಯಲ್ಲಿ ಅಶೋಕ ಹನಮಂತ ಶಂಕರಗೌಡಾ ರವರನ್ನು ಸಾಕ್ಷಿದಾರನ್ನಾಗಿ 2ನೇ ವಾದಿ ಮಾಡಿರುತ್ತಾನೆ ನಿಮಗೆ ಸದರಿ ಸಾಕ್ಷಿ ಕೊಟ್ಟಿರುವ ಬಗ್ಗೆ ತಿಳಿದಿದೆಯಾ ಎಂದರೆ ಸಾಕ್ಷಿ ತಿಳಿದಿದೆ ಎನ್ನುತ್ತಾರೆ. ಸದರಿ ಅಶೋಕ ರವರು ಸದರಿ ದಾವೆಯಲ್ಲಿ ತಾನು RS No.193/2 ರಲ್ಲಿ ತಾನು ಕಬ್ಜಾ ಇದ್ದ ಬಗ್ಗೆ ಯಾವುದೇ ಪುರಾವೆ ಇಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ ಎಂದರೆ ಸಾಕ್ಷಿ ಮೊದಲು ಹೌದು ಎಂದು ನಂತರ ಇಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಸದರಿಯವರು ನಮ್ಮ ಪರವಾಗಿ ಉಳುಮೆ ಮಾಡುತ್ತಾರೆ ಎನ್ನುತ್ತಾರೆ. ನಾನು ಅಶೋಕ ಹನಮಂತ ಶಂಕರಗೌಡಾ ರವರ ಮುಖ್ಯ ವಿಚಾರಣೆಯನ್ನು ಓದಿರುತ್ತೀರಾ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎನ್ನುತ್ತಾರೆ.

ಪ್ರಶ್ನೆಃ ನೀವು OS No.6/2015 ಯಾವ ಯಾವ ಸಾಕ್ಷಿದಾರರು ಸಾಕ್ಷಿ ನೀಡಿರುತ್ತಾರೆ ಎಂದು ತಿಳಿದುಕೊಳ್ಳಲು ಅಡಚಣೆ ಇರುತ್ತದೆಯಾ ಎಂದರೆ ?

ಉತ್ತರಃ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ.

4. ನೀವು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುವುದಕ್ಕೆ ಸಂಬಂದಿಸಿದಂತೆ ದಾಖಲೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ಹಾಜರು ಪಡಿಸಿರುತ್ತೇನೆ ಎನ್ನುತ್ತಾರೆ. ಸದರಿ ಯಾವ ದಾಖಲೆ ಹಾಜರು

ಪಡಿಸಿರುತ್ತೀರಾ ಎಂದರೆ ಸಾಕ್ಷಿ ಹಾಜರು ಪಡಿಸಿರುತ್ತೇನೆ ಎಂದು ಹೇಳುತ್ತಾರೆ ಯಾವ ದಾಖಲೆ ಎಂದು ಹೇಳಿರುವುದಿಲ್ಲ. RS No.193/2 ರಲ್ಲಿ ಸರಕಾರಿ ಕಂದಾಯ ತುಂಬಿದ ಬಗ್ಗೆ ಅಥವಾ ಬೆಳೆ ಬೆಳೆದು ಮಾರಾಟ ಮಾಡಿದ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ನನ್ನ ಮಗನಿಗೆ ಗೊತ್ತು. 2ನೇ ವಾದಿ ಸಾಕ್ಷಿ ಮಾಡಿಸುತ್ತೀರಾ ಎಂದರೆ ಸಾಕ್ಷಿ ಮಾಡಿಸುತ್ತೇನೆ ಎನ್ನುತ್ತಾರೆ. ಪ್ರತಿವಾದಿ 1 ರಿಂದ 6 ರವರು ಯಾವುದೇ ಕರಾರು ಪತ್ರನ್ನು ಕಿಶನ ರವರ ಹೆಸರಿಗೆ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ಖೊಟ್ಟಿ ದಾಖಲು ಆಗಿರುತ್ತದೆ ಎಂದರೆ ಸರಿಯಲ್ಲ. ನಿಮಗೆ ಎಲ್ಲಾ ಗೊತ್ತಿದ್ದರೂ ಸಹ ಸುಳ್ಳು ದಾವೆ ಹೂಡಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**